ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಪತ್ರಿಕೆ ಹೆಸರು : NAME OF THE NEWS PAPER: ವಿಶ್ವವಾಣಿ  ದಿನಾಂಕ : DATE : 17/03/2020

# ಅಧಿವೇಶನವನ್ನು ಬಾಧಿಸದ ಕರೋನಾ

ಸಿ. ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಮಹಾಮಾರಿ ಕರೋನಾ ದೇಶಕ್ಕೆ ಪಸರಿಸಿ ದಿನದಿನಕ್ಕೂ ದಾಂಗುಡಿ ಇಡುತ್ತಿದ್ದರೂ ಪ್ರಸ್ತುತ ನಡೆಯುತ್ತಿರುವ ರಾಜ್ಯ ವಿಧಾನಮಂಡಲ ಅಧಿವೇಶನದಲ್ಲಿ ನಿರ್ಲಕ್ಷ್ಯವಿರುವುದು ಚರ್ಚೆಗೆ ಗ್ರಾಸವಾಗಿದೆ.

ಮಾರಣಾಂತಿಕ ಕರೋನಾ ದೇಶಕ್ಕೆ ಕಾಲಿಟ್ಟು 20 ದಿನಗಳೇ ಕಳೆದಿದ್ದು, ಈತನಕ 114 ಮಂದಿಯನ್ನು ಬಾಧಿಸುತ್ತಾ ರೋಗಿಗಳಿಬ್ಬರನ್ನು ಬಲಿ ತೆಗೆದುಕೊಂಡಿದೆ. ಆತಂಕದ ವಿಚಾರ ಎಂದರೆ, ದೇಶದಲ್ಲೇ ಮೊದಲ ಬಲಿಯಾಗಿರುವುದು ಕರ್ನಾಟಕದಲ್ಲಿ. ಇಷ್ಟಾದರೂ ಕಳೆದ 15 ದಿನಗಳಿಂದ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ ಮಹಾಮಾರಿ ಕರೋನಾ ಬಗ್ಗೆ ನಿರೀಕ್ಷಿತ ರೀತಿಯಲ್ಲಿ ಚರ್ಚೆ ನಡೆಯದಿರುವುದು ಶಾಸಕರ ಮಧ್ಯೆಯೇ ಪ್ರಶ್ನೆ ಹುಟ್ಟುಹಾಕಿದೆ. ಅದರಲ್ಲೂ ರಾಜ್ಯ ಸರಕಾರ ವಾರದ ಮುಂಚೆಯೇ ಕರೋನಾ ತಡೆಗೆ ಮಾಲ್, ಚಿತ್ರಮಂದಿರ ಮುಚ್ಚಿಸಿ ಕರ್ನಾಟಕ ಬಂದ್ ಮಾದರಿ ಆದೇಶ ಹೊರಡಿಸಿದೆ. ಆದರೆ ವಿಧಾನಮಂಡಲದಲ್ಲೇ ಕರೋನಾ ಕಡೆಗಣಿಸಿರುವುದು ಅಚ್ಚರಿಗೆ ಕಾರಣವಾಗಿದೆ.

**ಕರೋನಾಕ್ಕಿಂತ ಬೇರೆ ಚರ್ಚೆ ಅಗತ್ಯವೇ?:** ಹವಾನಿಯಂತ್ರಿತ ವ್ಯವಸ್ಥೆಯಿಂದ ಕರೋನಾ ಸೋಂಕು ಸುಲಭವಾಗಿ ಹರಡಲಿದೆ ಎನ್ನುವುದನ್ನು ವೈದ್ಯಕೀಯ ಕ್ಷೇತ್ರದ ತಜ್ಞರು ಈಗಾಗಲೇ ಹೇಳಿದ್ದಾರೆ. ಆದರೆ ಅಲ್ಲಿ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಹವಾನಿಯಂತ್ರಿತ ವ್ಯವಸ್ಥೆ ಇರುವುದರಿಂದ ಅಧಿವೇಶನ ನಡೆಸುವುದೇ ಒಳಿತಲ್ಲ ಎನ್ನುವ ಮಾತುಗಳಿವೆ.

ಈ ಮಧ್ಯೆಯೂ ಅಧಿವೇಶನ ಮುಂದುವರಿಸುವ ಅನಿವಾರ್ಯವಿದ್ದರೆ, ಕರೋನಾ ಸಂಕಟದ ಬಗ್ಗೆಯೇ ಗಂಭೀರ ಚರ್ಚೆ ನಡೆಸಬೇಕು. ರೋಗ ತಡೆಯುವುದು ಮತ್ತು ಹರಡದಂತೆ ಮಾಡುವ ಬಗ್ಗೆ ಎಲ್ಲ ಕೋನಗಳಲ್ಲೂ ಚರ್ಚೆ ನಡೆಸುವಂತೆ ಮಾಡಬೇಕು. ಆದರೆ ವಿಧಾನಸಭೆಯಲ್ಲಿ ಕಳೆದ ಶುಕ್ರವಾರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಸಾಂದರ್ಭಿಕವಾಗಿ ಚರ್ಚಿಸಿದನ್ನು ಬಿಟ್ಟರೆ ಅಂಥ ಗಂಭೀರ ಚರ್ಚೆ ನಡೆದಿಲ್ಲ. ಒಮ್ಮೆ ಮಾತ್ರ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಶ್ರೀರಾಮುಲು ಈ ಬಗ್ಗೆ ಹೇಳಿಕೆ ನೀಡಿ ಕೈತೊಳೆದುಕೊಂಡರು.

5

## ಜ್ವಲಂತ ಸಮಸ್ಯೆ ಮರೆಮಾಚುವ ತಂತ್ರವೇ ?

ರಾಜ್ಯಾದ್ಯಂತ ಕರೋನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಿತ್ಯ ಅಧಿಕಾರಿಗಳ ಸಭೆ ನಡೆಸಿ ಮಾಧ್ಯಮಗಳಿಗೆ ಮಾಹಿತಿ ನೀಡುತ್ತಿರುವ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರು, ಸದನದಲ್ಲಿ ಏಕೆ ಈ ಬಗ್ಗೆ ಸುದೀರ್ಘ ಚರ್ಚೆ ನಡೆಯುವಂತೆ ಮಾಡುತ್ತಿಲ್ಲ ಎಂಬ ಪ್ರಶ್ನೆಗಳು ಸೋಮವಾರ ವಿಧಾನಸಭೆ ಮೊಗಸಾಲೆಯಲ್ಲೂ ಕೇಳಿಬಂದಿತ್ತು. ಏಕೆಂದರೆ, ನಿಗದಿಯಂತೆ ವಿಧಾನಸಭೆಯಲ್ಲಿ ಎರಡು ದಿನಗಳ ಚರ್ಚೆಗೆ ಸೀಮಿತವಾಗಿದ್ದ ಸಂವಿಧಾನ ಕುರಿತ ಚರ್ಚೆಯನ್ನು ಆರನೇ ದಿನಕ್ಕೆ ವಿಸ್ತರಿಸಿ, ನಂತರ ಬಜೆಟ್ ಮೇಲಿನ ಚರ್ಚೆ ನಡೆಸುತ್ತಿರುವುದನ್ನು ಗಮನಿಸಿದರೆ, ಇದು ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಮರೆಮಾಚುವ ತಂತ್ರ ಇರಬಹುದು ಎಂದು ಪ್ರತಿಪಕ್ಷದ ಕೆಲವು ಸದಸ್ಯರು ಹೇಳುತ್ತಿದ್ದಾರೆ. ಆದರೆ ಇದನ್ನು ಆಡಳಿತ ಪಕ್ಷದ ಸದಸ್ಯರು ತಳ್ಳಿ ಹಾಕುತ್ತಿದ್ದು, ಇನ್ನೂ ಸಮಯವಿದೆ ಚರ್ಚಿಸೋಣ ಎನ್ನುತ್ತಿದ್ದಾರೆ.

ಈ ಬಗ್ಗೆ ಸ್ವಲ್ಪ ಚರ್ಚೆಯಾಗಿತ್ತು. ಅದರೂ ಸಾಲದು. ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಬೇಕು. ಸೂಕ್ತ ಕಾರ್ಯಕ್ರಮಕ್ಕೆ ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ನಾವು ಸರಕಾರವನ್ನು ಒತ್ತಾಯ ಮಾಡುತ್ತೇನೆ.
-ಶಿವಶಂಕರ ರೆಡ್ಡಿ, ಮಾಜಿ ಸ್ಪೀಕರ್, ಶಾಸಕ

ರಾಜ್ಯದಲ್ಲಿ ಆರೋಗ್ಯ ತುರ್ತುಪರಿಸ್ಥಿತಿ ಉಂಟಾಗಿದೆ. ಇದನ್ನು ಸರಕಾರವೇ ಘೋಷಣೆ ಮಾಡಿದೆ. ಆದರೆ ಅದೇ ಸರಕಾರವೇ [illegible] ಅಲಕ್ಷ್ಯ ಮಾಡಿ ಸದನದಲ್ಲಿ ಜ್ವಲಂತ ಸಮಸ್ಯೆ ಬಿಟ್ಟು ಬೇರೆ ವಿಚಾರಗಳ ಚರ್ಚೆಗೆ ಮುಂದಾಗುತ್ತಿದೆ. ಇದು ಸದನವನ್ನು ಸರಕಾರವೇ ದಿಕ್ಕು ತಪ್ಪಿಸುತ್ತಿರುವ ಕ್ರಮವಾಗಿದೆ.
-ರಮೇಶ್ ಬಾಬು ವಿಧಾನ ಪರಿಷತ್ ಮಾಜಿ ಸದಸ್ಯ

# ಅಧಿವೇಶನವನ್ನು ಬಾಧಿಸದ ಕರೋನಾ

← ಮೊದಲಪುಟದಿಂದ

ಇನ್ನು ವಿಧಾನಪರಿಷತ್ತಿನಲ್ಲಿ ಸೋಮವಾರ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್, ಕರೋನಾ ಬಗ್ಗೆ ಪ್ರಸ್ತಾಪಿಸಿದಾಗ ಆರೋಗ್ಯ ಸಚಿವ ಶ್ರೀರಾಮುಲು ಉತ್ತರ ನೀಡಿ ಪೂರ್ಣ ವಿರಾಮ ಹಾಕಿದರು. ಇದನ್ನು ಹೊರತುಪಡಿಸಿದರೆ, ಈತನಕ ಉಭಯ ಸದನಗಳಲ್ಲಿ ಶೂನ್ಯವೇಳೆಯಲ್ಲಾಗಲಿ, ಅರ್ಧಗಂಟೆ ಚರ್ಚೆಯಾಗಲಿ, ಗಮನಸೆಳೆಯುವ ಸೂಚನೆಗಳ ಕಲಾಪದ ನೆಪದಲ್ಲಾದರೂ ಕರೋನಾ ಚರ್ಚೆಯಾಗುತ್ತಿಲ್ಲ.

**ಸೋಂಕಿತರು 1000 ದಾಟಿದರೆ ಗತಿ ಏನು ?:** ಕರೋನಾ ವಿದೇಶಗಳಲ್ಲಿ ವೇಗವಾಗಿ ವ್ಯಾಪಿಸಿದೆ, ನಮ್ಮ ರಾಜ್ಯದ ನಗರಗಳಲ್ಲಿ ವ್ಯಾಪಿಸುತ್ತಿದೆ. ಇದಕ್ಕೆ ರಾಜ್ಯ ಹೇಗೆ ಸಜ್ಜಾಗಿದೆ. ಸೋಂಕಿತರ ಸಂಖ್ಯೆ 1000 ದಾಟಿದರೆ ಅಷ್ಟು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಸಾಧ್ಯ. ಎಷ್ಟು ಆಸ್ಪತ್ರೆಗಳಲ್ಲಿ ಹೆಚ್ಚಿನ ರೀತಿಯ ಕೃತಕ ಉಸಿರಾಟ ವ್ಯವಸ್ಥೆ ಇದೆ.

ಮಾಸ್ಕ್ ಮತ್ತು ಸ್ಯಾನಿಟೈಸರ್ ಪೂರೈಕೆಯಲ್ಲಿ ಆಗುತ್ತಿರುವ ವ್ಯತ್ಯಯಕ್ಕೆ ಏನು ಮಾಡುವುದು ಎನ್ನುವ ಚರ್ಚೆಗಳ ನಡೆಯುತ್ತಿಲ್ಲ, ಬದಲಿಗೆ ಸದನದಲ್ಲಿ ಸಾಧಾರಣಾ ಕಲಾಪಗಳು ನಡೆಯುತ್ತಿವೆ. ಮಂಗಳವಾರ ಉಭಯ ಸದನಗಳಲ್ಲೂ ಬಜೆಟ್ ಮೇಲಿನ ಚರ್ಚೆ ನಡೆಯಲಿದ್ದು, ಕಲಾಪ ಪಟ್ಟಿಯಲ್ಲಿ ಕರೋನಾ ಬಗ್ಗೆ ಪ್ರಸ್ತಾಪ ಕೂಡ ಕಾಣುತ್ತಿಲ್ಲ ಎನ್ನುತ್ತಾರೆ ಕರೋನಾ ಆತಂಕದಲ್ಲಿರುವ ಶಾಸಕರು.